## ಕಂದಾಯ ಅದಾಲತ್

**892 (857); ಶ್ರೀ ಬಾಲಕೃಷ್ಣ.ಹೆಚ್.ಸಿ. (ಮಾಗಡಿ)**

ಅ) ರಾಮನಗರ ಜಿಲ್ಲೆಯಲ್ಲಿ ಕಂದಾಯ ಅದಾಲತ್ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕಂದಾಯ ಅದಾಲತ್ ನಲ್ಲಿ ಬಂದಿರುವ ಅರ್ಜಿಗಳು ಎಷ್ಟು;

ಇ) ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ? ಇನ್ನೂ ಎಷ್ಟು ಅರ್ಜಿಗಳು ಬಾಕಿ ಇವೆ?

ಈ) ಬಾಕಿ ಇರುವ ಅರ್ಜಿಗಳನ್ನು ಯಾವ ಕಾಲಮಿತಿಯಲ್ಲಿ ವಿಲೇವಾರಿ ಮಾಡಲಾಗುವುದು?

**ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)**

ಅ) ಹೌದು.

ಆ) ರಾಮನಗರ ಜಿಲ್ಲೆಯಲ್ಲಿ ನಡೆದ ಕಂದಾಯ ಅದಾಲತ್ ನಲ್ಲಿ ಬಂದಿರುವ ಅರ್ಜಿಗಳ ಒಟ್ಟು ಸಂಖ್ಯೆ: 6761 ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ತಾಲ್ಲೂಕು | ಸ್ವೀಕೃತಿ |
|---|---|---|
| 1 | ರಾಮನಗರ | 1215 |
| 2 | ಕನಕಪುರ | 2206 |
| 3 | ಚನ್ನಪಟ್ಟಣ | 1458 |
| 4 | ಮಾಗಡಿ | 1882 |
| | ಒಟ್ಟು | **6761** |

ಇ) ಒಟ್ಟು ವಿಲೇ ಆಗಿರುವ ಅರ್ಜಿಗಳ ಸಂಖ್ಯೆ 4091 ಹಾಗೂ ಇನ್ನೂ ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ 2670.

| ಕ್ರ.ಸಂ | ತಾಲ್ಲೂಕುಗಳು | ವಿಲೇ | ಬಾಕಿ |
|---|---|---|---|
| 1 | ರಾಮನಗರ | 435 | 780 |
| 2 | ಕನಕಪುರ | 1391 | 815 |
| 3 | ಚನ್ನಪಟ್ಟಣ | 1310 | 148 |
| 4 | ಮಾಗಡಿ | 955 | 927 |
| | ಒಟ್ಟು | **4091** | **2670** |

ಈ) ಸರ್ಕಾರದ ಆದೇಶ ಸಂಖ್ಯೆ ಕಂಇ 44 ಎಂಆರ್‌ಆರ್ 2014 ದಿನಾಂಕ 28/05/2014 ರನ್ವಯ ಕಂದಾಯ ಅದಾಲತ್‌ಗಳನ್ನು ನಡೆಸಲು ಆದೇಶಿಸಿದ್ದು, ನಡೆಸುವ ವಿಧಾನವನ್ನು ಸುತ್ತೋಲೆ ಸಂಖ್ಯೆ: ಕಂಇ 44 ಎಂಆರ್‌ಆರ್ 2014 ದಿನಾಂಕ 25/10/2014 ರನ್ವಯ ಕಂದಾಯ ಅದಾಲತ್ ನಡೆಸುವ ಸಂಬಂಧ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ ಹಾಗೂ ಇದೇ ಆದೇಶದ ದಿನಾಂಕ 25/10/2014 ರನ್ವಯ ಪಹಣಿಗಳಲ್ಲಿನ ಕೆಲವು ಲೋಪದೋಷಗಳನ್ನು ತಿದ್ದುಪಡಿ ಮಾಡುವ ಅಧಿಕಾರವನ್ನು ತಹಶೀಲ್ದಾರರಿಗೆ ದಿನಾಂಕ 31/03/2015 ರ ವರೆಗೆ ಪ್ರತ್ಯಾಯೋಜಿಸಲಾಗಿದೆ. ಅದರಂತೆ ಬಾಕಿ ಇರುವ ಅರ್ಜಿಗಳನ್ನು ನಿಯಮಾನುಸಾರ ಆದ್ಯತೆ ಮೇರೆಗೆ ವಿಲೇ ಮಾಡಲಾಗುತ್ತಿದೆ.

## ಹೊಸ ತಾಲ್ಲೂಕುಗಳ ರಚನೆ

894 (56); ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ)

ಅ) ರಾಜ್ಯದಲ್ಲಿ ಹೊಸದಾಗಿ ತಾಲ್ಲೂಕುಗಳನ್ನು ರಚಿಸಲಾಗುತ್ತಿದೆಯೇ; ಹಾಗಿದ್ದಲ್ಲಿ, ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಹೊಸದಾಗಿ ಯಾವ ಯಾವ ತಾಲ್ಲೂಕುಗಳನ್ನು ರಚಿಸಲಾಗುತ್ತಿದೆ; (ವಿವರಗಳನ್ನು ನೀಡುವುದು)

ಆ) 2012–13ನೇ ಸಾಲಿನಲ್ಲಿ ಸರ್ಕಾರ ಹೊಸ ತಾಲ್ಲೂಕುಗಳನ್ನು ರಚಿಸಿ ಆದೇಶ ಮಾಡಿರುವುದನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು?